ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂ.	536
ಮಾನ್ಯ ಸದಸ್ಯರ ಹೆಸರು	ಡಾ. ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	16-12-2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ 5 ವರ್ಷಗಳಲ್ಲಿ ಮದ್ಯದ ಬಾಟಲಿಗಳ ಮೇಲೆ ಅಂಟಿಸುವ ಅಬಕಾರಿ ಅಂಟು ಚೀಟಿಯನ್ನು(ಲೇಬಲ್) ಮುದ್ರಿಸುವ ಗುತ್ತಿಗೆಯನ್ನು ಯಾವ ಸಂಸ್ಥೆಗಳಿಗೆ ವಹಿಸಲಾಗಿದೆ. ದರ ಕರಾರು ಗುತ್ತಿಗೆ ನೀಡುವಲ್ಲಿ ಅನುಸರಿಸಿರುವ ನಿಯಮಗಳು ಮತ್ತು ಮಾನದಂಡಗಳೇನು? (ಪ್ರತ್ಯೇಕ ಸಂಪೂರ್ಣ ಮಾಹಿತಿ ಒದಗಿಸುವುದು)	ಕಳೆದ 05 ವರ್ಷಗಳಿಂದ ಮದ್ಯದ ಬಾಟಲಿಗಳ ಮೇಲೆ ಅಂಟಿಸುವ ಅಬಕಾರಿ ಭದ್ರತಾ ಚೀಟಿಗಳನ್ನು ಅಬಕಾರಿ ಇಲಾಖೆಯ ಅಗತ್ಯಕ್ಕನುಗುಣವಾಗಿ ಮುದ್ರಿಸಿ, ಸರಬರಾಜು ಮಾಡುವ ಕಾರ್ಯವನ್ನು ಸರ್ಕಾರಿ ಸ್ವಾಮ್ಯದ ಮಾರ್ಕೇಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರಟೈಸಿಂಗ್ ಲಿಮಿಟೆಡ್ ಸಂಸ್ಥೆ (MC&A), ಎಂಸಿ ಅಂಡ್ ಎ ಹೌಸ್, 42, ಮಿಲ್ಲರ್ಸ್ ರಸ್ತೆ, ಬೆಂಗಳೂರು ಇವರಿಗೆ ವಹಿಸಲಾಗಿದ್ದು, ಇವರು ಸದರಿ ಗುತ್ತಿಗೆಯನ್ನು ಮೆ॥ ಮಣಿಪಾಲ್ ಟೆಕ್ನಾಲಜಿ, ಮಣಿಪಾಲ್ ಇವರಿಗೆ ವಹಿಸಿರುತ್ತಾರೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ರಡಿಯಲ್ಲಿ ಮೆ.ಎಂ.ಸಿ.ಎ. ಸಂಸ್ಥೆಗೆ ವಿನಾಯಿತಿಯನ್ನು ನೀಡುವ ಮುಖಾಂತರ ಅಬಕಾರಿ ಭದ್ರತಾ ಚೀಟಿಗಳ ಮುದ್ರಣಕ್ಕೆ ಅವಕಾಶ ನೀಡಲಾಗಿರುತ್ತದೆ. ದರ ಕರಾರು ಗುತ್ತಿಗೆ ನೀಡುವಲ್ಲಿ ಅನುಸರಿಸುವ ನಿಯಮಗಳು ಮತ್ತು ಮಾನದಂಡಗಳ ತಾಂತ್ರಿಕ ಅಂಶಗಳ ವಿವರವನ್ನು **ಅನುಬಂಧದಲ್ಲಿ** ಇರಿಸಿದೆ.
ಆ)	ಪ್ರತಿ ವರ್ಷ ಮದ್ಯದ ಬಾಟಲಿಗಳ ಮೇಲೆ ಅಂಟಿಸುವ ಲೇಬಲ್‌ಗಳ ಕುರಿತಾಗಿ ಗುತ್ತಿಗೆ ಟೆಂಡರ್ ಕರೆಯಲಾಗುತ್ತಿದೆಯೇ; ಹಾಗಿದ್ದಲ್ಲಿ ಈ	ಅಬಕಾರಿ ಭದ್ರತಾ ಚೀಟಿಗಳನ್ನು ಮುದ್ರಿಸಿ ಸರಬರಾಜು ಮಾಡುವ ಕಾರ್ಯವನ್ನು ಸರ್ಕಾರಿ ಸ್ವಾಮ್ಯದ ಮಾರ್ಕೇಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರಟೈಸಿಂಗ್ ಲಿಮಿಟೆಡ್ ಸಂಸ್ಥೆ (MC&A), ಎಂಸಿ ಅಂಡ್

	ನಿಟ್ಟಿನಲ್ಲಿ ಅನುಸರಿಸಲಾಗುತ್ತಿರುವ ನಿಯಮಾವಳಿಗಳೇನು? (ವಿವರ ಒದಗಿಸುವುದು)	ಎ ಹೌಸ್, 42, ಮಿಲ್ಲರ್ಸ್ ರಸ್ತೆ, ಬೆಂಗಳೂರು ಇವರಿಗೆ 1990 ರಿಂದ ವಹಿಸಲಾಗಿರುತ್ತದೆ. ಮೆ.ಎಂ.ಸಿ.&ಎ ಸಂಸ್ಥೆಯು ಕಾಲಕಾಲಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ)ರಡಿಯಲ್ಲಿ ಸರ್ಕಾರದಿಂದ ವಿನಾಯತಿ ಪಡೆದಿರುತ್ತದೆ. ಗುತ್ತಿಗೆ ನೀಡುವ ಪ್ರಕಿಯೆಯು ಮೆ.ಎಂ.ಸಿ&ಎ ಸಂಸ್ಥೆಯವರ ಹೊಣೆಗಾರಿಕೆಯಾಗಿರುತ್ತದೆ, ಹಾಗಾಗಿ ಇವರು ದಿನಾಂಕ:28.07.2009ರಂದು ಮದ್ಯದ ಬಾಟಲಿಗಳ ಮೇಲೆ ಅಂಟಿಸುವ ಲೇಬಲ್‌ಗಳನ್ನು ತಯಾರು ಮಾಡುವ ಗುತ್ತಿಗೆಯನ್ನು ಟೆಂಡರ್ ಮುಖಾಂತರ ಮೆ.ಮಣಿಪಾಲ್ ಟೆಕ್ನಾಲಾಜಿಸ್ ಲಿಮಿಟೆಡ್ ಇವರಿಗೆ ನೀಡಿರುತ್ತಾರೆ. ತಂತ್ರಾಂಶ ಮತ್ತು ಭದ್ರತಾ ಅಂಶಗಳಲ್ಲಿ ಯಾವುದೇ ಬದಲಾವಣೆಯು ತದನಂತರದಲ್ಲಿ ಇಲ್ಲದೆ ಇದ್ದ ಕಾರಣ ಸರ್ಕಾರದಿಂದ 4(ಜಿ) ವಿನಾಯಿತಿ ಪಡೆದು ಅವರೇ ಚೀಟಿಗಳನ್ನು ಸರಬರಾಜು ಮಾಡುತ್ತಿರುತ್ತಾರೆ. ತದನಂತರ ದಿನಾಂಕ:17.10.2019ರಂದು ಹೊಸ ವಿನ್ಯಾಸ ಮತ್ತು ಇನ್ನೂ ಹೆಚ್ಚು ಭದ್ರತಾ ಅಂಶಗಳನ್ನು ಅಳವಡಿಸಿ ಶೀಟ್ ಫಾರ್ಮ್‌ನಿಂದ ಸುರುಳಿ ರೂಪಕ್ಕೆ (Roll Form) ಬದಲಾವಣೆ ಮಾಡುವಂತೆ ಡಿಸ್ಟಿಲರಿಯವರ ಕೋರಿಕೆ ಮೇರೆಗೆ ಟೆಂಡರ್ ಕರೆದು ಮುದ್ರಕರನ್ನು ನೇಮಿಸಿಕೊಳ್ಳಲಾಗಿದೆ. ಈ ಗುತ್ತಿಗೆಯು ದಿನಾಂಕ:01.04.2020 ರಿಂದ 30.03.2023ರ ವರೆಗೆ ಕರಾರನ್ನು ಮಾಡಿಕೊಳ್ಳಲಾಗಿದೆ.
ಇ)	ಅನಧಿಕೃತ ಲೇಬಲ್ಲುಗಳೊಂದಿಗೆ ಕರ್ನಾಟಕ ರಾಜ್ಯ ಪಾನೀಯಗಳ ನಿಗಮವು ಮದ್ಯವನ್ನು ಬಿಡುಗಡೆಗೊಳಿಸಲಾಗಿತ್ತು ಎಂಬ ಲೆಕ್ಕ ಪರಿಶೋಧನಾ ವರದಿಯನ್ನು ಸರ್ಕಾರ ಗಮನಿಸಿದೆಯೇ: ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ	ಹೌದು. ಮೆ.ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್‌ಟೈಸಿಂಗ್ ಲಿ., (MC&A) ಇವರು ಈ ಕುರಿತು ವರದಿ ಸಲ್ಲಿಸಿದ್ದು, ಬೆರಳಚ್ಚು ದೋಷದಿಂದ ಅಬಕಾರಿ ಭದ್ರತಾ ಚೀಟಿಗಳ ಸಂಖ್ಯೆಯಲ್ಲಿ ವ್ಯತ್ಯಾಸವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಹೀಗಾಗಿ ಸದರಿ ಲೇಬಲ್‌ಗಳು ಅನಧಿಕೃತವಾಗಿರುವುದಿಲ್ಲ.

	ಕ್ರಮಗಳೇನು?(ವಿವರ ಒದಗಿಸುವುದು)	ಮುಂದೆ ಇಂತಹ ತಪ್ಪುಗಳು ನಡೆಯದಂತೆ ಕ್ರಮ ಕೈಗೊಳ್ಳಲಾಗಿದ್ದು, ಕರ್ನಾಟಕ ರಾಜ್ಯ ಪಾನೀಯ ನಿಗಮವು ಎಂಸಿ&ಎ ಸಂಸ್ಥೆಯೊಂದಿಗೆ ಇಂಟಿಗ್ರೇಷನ್ ಕಾರ್ಯ ಕೈಗೊಂಡಿರುತ್ತದೆ.
ಈ)	ಇದರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟವೆಷ್ಟು? (ನಷ್ಟ ವಸೂಲಾತಿಗೆ ಸರ್ಕಾರ ಕೈಗೊಂಡ ಕ್ರಮಗಳ ಕುರಿತು ಸಂಪೂರ್ಣ ಮಾಹಿತಿ ಒದಗಿಸುವುದು.)	ಇದರಿಂದ ಸರ್ಕಾರಕ್ಕೆ ಯಾವುದೇ ನಷ್ಟ ಉಂಟಾಗಿರುವುದಿಲ್ಲ. ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 16(3) ರನ್ವಯ ಯಾವುದೇ ಡಿಸ್ಟಿಲರಿಯಿಂದ ಮದ್ಯವನ್ನು ಮಾರಾಟಕ್ಕೆ ಕಳುಹಿಸುವ ಮುನ್ನ ಅದಕ್ಕೆ ಅನ್ವಯವಾಗುವ ಕರ ಮತ್ತು ತೆರಿಗೆಗಳನ್ನು ಪಾವತಿಸಿದ ನಂತರವಷ್ಟೇ ಬಿಡುಗಡೆ ಮಾಡಬೇಕೆಂದು ಉಲ್ಲೇಖವಿರುತ್ತದೆ. ಅದರನ್ವಯ ಕರ್ನಾಟಕ ರಾಜ್ಯ ಪಾನೀಯ ನಿಗಮವು ಕರ ಪಾವತಿಯಾದ ಮದ್ಯವನ್ನು ಡಿಸ್ಟಿಲರಿಗಳಿಂದ ಸ್ವೀಕರಿಸಿ ಅದನ್ನು ಚಿಲ್ಲರೆ ಮದ್ಯ ಮಾರಾಟಗಾರರಿಗೆ ಮಾರಾಟ ಮಾಡಿ, ಮಾರಾಟದಿಂದ ಬಂದ ಹಣದಲ್ಲಿ ತನ್ನ ಮಾರ್ಜಿನ್ ಹಣ ಮುರಿದುಕೊಂಡು ಉಳಿದ ಎಲ್ಲ ಹಣವನ್ನು ಡಿಸ್ಟಿಲರಿಯವರಿಗೆ ಹಿಂತಿರುಗಿಸುತ್ತದೆ. ಹೀಗಾಗಿ ಎಲ್ಲ ಮದ್ಯವು ಕರ ಪಾವತಿಸಿದ ನಂತರವೇ ಕರ್ನಾಟಕ ರಾಜ್ಯ ಪಾನೀಯ ನಿಗಮಕ್ಕೆ ಸರಬರಾಜು ಆಗುವುದರಿಂದ ಅಬಕಾರಿ ಭದ್ರತಾ ಚೀಟಿಗಳ ಮೇಲಿನ ಸಂಖ್ಯೆಗಳ ವ್ಯತ್ಯಾಸದಿಂದ ಸರ್ಕಾರಕ್ಕೆ ಯಾವುದೇ ನಷ್ಟ ಉಂಟಾಗುವ ಪ್ರಮೇಯ ಉದ್ಭವಿಸುವುದಿಲ್ಲ.

ಆಇ 124 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಅನುಬಂಧ

1990ನೇ ಸಾಲಿನಿಂದ 2007ರವರೆಗೂ ಸರ್ಕಾರಿ ಸ್ವಾಮದ ಕಂಪನಿಯಾದ ಮೆ.ಎಂ.ಸಿ.&ಎ ಲಿಮಿಟೆಡ್.,ನವರೇ ಅಬಕಾರಿ ಭದ್ರತಾ ಚೀಟಿಗಳನ್ನು ಮುದ್ರಿಸಿ, ಸರಬರಾಜು ಮಾಡುವ ಜವಾಬ್ದಾರಿ ಹೊಂದಿದ್ದರು, ದಿನಾಂಕ:01-07-2007ರಿಂದ ಸರ್ಕಾರವು ಸಾರಾಯಿ ನಿಷೇಧ ಮಾಡಿದ ಕಾರಣ ಮದ್ಯದ ಮಾರಾಟದ ಪ್ರಮಾಣವು ಹೆಚ್ಚಾಗಿರುವುದನ್ನು ಮನಗಂಡು ಹಾಗೂ ಇನ್ನೂ ಹೆಚ್ಚಿನ ಭದ್ರತಾ ವೈಶಿಷ್ಟ್ಯಗಳನ್ನು ಅಬಕಾರಿ ಭದ್ರತಾ ಚೀಟಿಗಳಲ್ಲಿ ಸೇರ್ಪಡೆಗೊಳಿಸಿ, ವಿನ್ಯಾಸಗೊಳಿಸಲು ಅವಶ್ಯಕತೆ ಇದ್ದ ಕಾರಣ ಸರ್ಕಾರಿ ಸ್ವಾಮ್ಯದ ಮೆ.ಎಂ.ಸಿ.&ಎ ಲಿಮಿಟೆಡ್., ಕಂಪನಿಯವರು ಅಬಕಾರಿ ಭದ್ರತಾ ಚೀಟಿಗಳನ್ನು ಮುದ್ರಿಸಿ, ಸರಬರಾಜು ಮಾಡುವ ಜವಾಬ್ದಾರಿಯನ್ನು ಟೆಂಡರ್ ಪ್ರಕ್ರಿಯೆಯನ್ವಯ ಮೆ.ಮಣಿಪಾಲ್ ಟೆಕ್ನಲಾಜೀಸ್ ಲಿಮಿಟೆಡ್, ಮಣಿಪಾಲ್ ರವರಿಗೆ ಗುತ್ತಿಗೆ ನೀಡಿರುತ್ತಾರೆ.

ತದನಂತರದಲ್ಲಿ 2009ನೇ ಸಾಲಿನಲ್ಲಿ ರಚಿಸಲ್ಪಟ್ಟ ತಾಂತ್ರಿಕ ತಜ್ಞರ ಸಮಿತಿಯ ವರದಿಯನ್ವಯ ಅಬಕಾರಿ ಭದ್ರತಾ ಚೀಟಿಯಲ್ಲಿ ವಿಶಿಷ್ಟವಾದ HOLOGRAM ಅನ್ನು ಅಳವಡಿಸಲು ಶಿಪಾರಸ್ಸು ಮಾಡಿದ್ದ ಕಾರಣ, ಅಂತಹ ವಿಶಿಷ್ಟ ಲಕ್ಷಣವನ್ನು ಹೊಂದಿರುವಂತಹ ಅಬಕಾರಿ ಚೀಟಿಯನ್ನು ಮುದ್ರಿಸಿ, ಸರಬರಾಜು ಮಾಡಲು ಸೂಚಿಸಿದ ಮೇರೆ ಮೆ.ಎಂ.ಸಿ&ಎ ಸಂಸ್ಥೆಯು ಮತ್ತೊಮ್ಮೆ ಟೆಂಡರ್ ಕರೆದು ಸದರಿ ಜವಾಬ್ದಾರಿಯನ್ನು ಮೆ.ಮಣಿಪಾಲ್ ಟೆಕ್ನಲಾಜೀಸ್ ಲಿಮಿಟೆಡ್, ಮಣಿಪಾಲ್ ರವರಿಗೆ ವಹಿಸಿರುತ್ತಾರೆ. 2009 ರಿಂದ 2019ರವರೆಗೆ ದರ ಕರಾರು ಗುತ್ತಿಗೆ ನೀಡುವಲ್ಲಿ ಅನುಸರಿಸಿರುವ ನಿಯಮಗಳು ಮತ್ತು ಮಾನದಂಡಗಳ ತಾಂತ್ರಿಕ ಅಂಶಗಳು ಕೆಳಗಿನಂತಿದೆ.

ಸುಧಾರಿತ ವಿನ್ಯಾಸ ಹಾಗೂ ಹೆಚ್ಚಿನ ಭದ್ರತಾ ಅಂಶಗಳನ್ನು ಅಳವಡಿಸಿಕೊಂಡು ಚೀಟಿಗಳನ್ನು ಮುದ್ರಿಸುವುದು.

10 digit Serial Number with month & year.
Visible and Invisible Signature of Excise Commissioner
Micro lettering
3 digit Check No.
Self adhesive Paper
Readable 2D Barcode
Guillochi Design
Touch feel
Hidden Image / Latent image
Intaglio Rub Mark
Karnataka Government Logo
Security cut or Diamond cut Label

(I) **ಚೀಟಿಗಳ ಅಳತೆ:**

1. 14mm x 100mm ಪ್ರಮಾಣದ ಭದ್ರತಾ ಚೀಟಿಗಳನ್ನು 1000 ML, 750 MLm 375 ML
2. ಮುದ್ರಿಸುವ ಪೇಪರ್ ನ ಮತ್ತು Self Adhesive paperನ thickness ಹಾಲಿ ಇರುವಂತೆ

(II) <u>ಬಣ್ಣ:</u>

1. ಈಗಾಗಲೇ ಅನುಸರಿಸುತ್ತಿರುವ ವಿವಿಧ ಮದ್ಯಗಳಿಗೆ ಹಾಗೂ ಸ್ಥಳೀಯ, ರಪ್ತು ಮತ್ತು ಆಮದಿಗೆ ಸಹಾ ಪ್ರತ್ಯೇಕ ಬಣ್ಣಗಳನ್ನು ಹಾಲೋಗ್ರಾಂನಲ್ಲಿ ಮತ್ತು ಲೇಬಲ್‌ಗಳಲ್ಲಿ ಅಳವಡಿಸಿಕೊಳ್ಳುವುದು.
2. ಕರ್ನಾಟಕ ರಾಜ್ಯದ ಡಿಸ್ಟಿಲರಿ ಮತ್ತು ವೈನರಿಗಳಲ್ಲಿ ತಯಾರಾಗುವ ಮದ್ಯ ಮತ್ತು ವೈನ್ ಸೀಸೆಗಳ ಮೇಲೆ ಅಂಟಿಸಲಾಗುವ ಭದ್ರತಾ ಚೀಟಿಗಳನ್ನು ಹಸಿರು ಬಣ್ಣಗಳಲ್ಲಿ.
3. ಕರ್ನಾಟಕ ರಾಜ್ಯ ಡಿಸ್ಟಿಲರಿ ಮತ್ತು ವೈನರಿಗಳಲ್ಲಿ ತಯಾರಿಸಲಾಗುವ ಮದ್ಯವು ರಾಜ್ಯದಿಂದ ರಫ್ತಾಗುವ ಸೀಸೆಗಳಿಗೆ ಗುಲಾಬಿ ಬಣ್ಣಗಳಲ್ಲಿ.
4. ಹೊರರಾಜ್ಯ ಮತ್ತು ಹೊರ ದೇಶದಿಂದ ರಾಜ್ಯಕ್ಕೆ ಆಮದಾಗುವ ಮದ್ಯ, Low alchoholic Beverages ಮತ್ತು ವೈನ್‌ಗಳ ಸೀಸೆಗಳ ಮೇಲೆ ನೀಲಿ ಬಣ್ಣದಲ್ಲಿ ಭದ್ರತಾ ಚೀಟಿಗಳನ್ನು ಮುದ್ರಿಸುವುದು.

(III) **<u>Hologram Features</u>**

ಪೇಪರ್ ಭದ್ರತಾ ಚೀಟಿಗಳ ಮೇಲೆ ಹಾಲೋಗ್ರಾಂ ಸಹಾ ಅಳವಡಿಸುವುದು ಇಂತಹ ಹಾಲೋಗ್ರಾಂನ ತಾಂತ್ರಿಕ ಅಂಶಗಳು.

1. Size 14mm x 14mm
2. Multi Channel Effect
3. Concealed Image
4. Kinetic Effect and Readable Pattern
5. Covert Laser Readable Image
6. Micro letter

2019ರಲ್ಲಿ ಡಿಸ್ಟಿಲರಿಗಳ ಸಂಘದ ವಿನಂತಿಯ ಮೇರೆಗೆ ಹಾಗೂ ಸದರಿ ಅಬಕಾರಿ ಭದ್ರತಾ ಚೀಟಿಗಳನ್ನು ಮೆಕ್ಯಾನಿಕಲ್ ಆಗಿ (Mechanical) ಅಳವಡಿಕೆ ಮಾಡಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಸದರಿ ಲೇಬಲ್ ಗಳನ್ನು Sheet Form ಬದಲಾಗಿ Roll formನಲ್ಲಿ ಮುದ್ರಿಸಿ ಸರಬರಾಜು ಮಾಡಲು ಕೋರಿರುತ್ತಾರೆ. ಅದರಂತೆ, ಸರ್ಕಾರದ ನಿರ್ದೇಶನದ ಮೇರೆಗೆ ಮೆ.ಎಂ.ಸಿ.&ಎ ಲಿಮಿಟೆಡ್., ನವರು ಸದರಿ ಅಬಕಾರಿ ಭದ್ರತಾ ಚೀಟಿಗಳನ್ನು Sheet Form ನ ಬದಲಾಗಿ Roll Formನಲ್ಲಿ ಮುದ್ರಿಸಿ ಸರಬರಾಜು ಮಾಡಲು ಟೆಂಡರ್ ಅನ್ನು ಆಹ್ವಾನಿಸಿದ್ದು, ಯಶಸ್ವಿಯಾದ ಮೆ.ಮಣಿಪಾಲ್ ಟೆಕ್ನಾಲಜೀಸ್, ಮಣಿಪಾಲ್ ರವರಿಗೆ ಸದರಿ ಜವಾಬ್ದಾರಿ ವಹಿಸಿರುತ್ತಾರೆ.

ಸದರಿ ಅಬಕಾರಿ ಭದ್ರತಾ ಚೀಟಿಗಳಿಗೆ ತಗಲುವ ವೆಚ್ಚವನ್ನು ಸಂಬಂಧಪಟ್ಟ ಡಿಸ್ಟಿಲರಿಗಳೇ ನೇರವಾಗಿ ಮೆ.ಎಂ.ಸಿ.& ಎ ಲಿಮಿಟೆಡ್., ಗೆ ಪಾವತಿಸುತ್ತಿದ್ದು, ಸರ್ಕಾರವು ಯಾವುದೇ ಅಬಕಾರಿ ಭದ್ರತಾ ಚೀಟಿಗಳ ಮೇಲಿನ ವೆಚ್ಚವನ್ನು ಭರಿಸುತ್ತಿಲ್ಲ. 2020 ರಿಂದ ದರ ಕರಾರು ಗುತ್ತಿಗೆ ನೀಡುವಲ್ಲಿ ಅನುಸರಿಸುವ ನಿಯಮಗಳು ಮತ್ತು ಮಾನದಂಡಗಳ ತಾಂತ್ರಿಕ ಅಂಶಗಳ ವಿವರಗಳು ಕೆಳಗಿನಂತಿದೆ.

1. Encrypted 2D Barcode
2. Month code
3. Month & year
4. 10 Digits Serial Number
5. Item code
6. Check digit
7. State code
8. Micro Lettering
9. Hologram
    a. State Emblem
    b. Multi-Channel Effect
    c. Concealed Image
    d. Kinetic Effect and Guilloche Pattern
    e. Covert Laser Readable Image
    f. Micro letter

Additional Features of Hologram

1. Micro image
2. Gradient effect
3. Switch effect
4. Lens effect

10. Security cut
11. Invisible Printing
12. Guilloche design
13. Intaglio Latent Image
14. Intaglio Rub Mark
15. Govt. of Karnataka logo in intaglio
16. Thermochromic feature
17. Security Taggent

ಆಇ 124 ಇಎಲ್‌ಕ್ಯೂ 2021